ಶ್ರೀ ಕೆ.ಶ್ರೀನಿವಾಸ ಗೌಡ: ಮಾನ್ಯ ಅಧ್ಯಕ್ಷರೇ, ತಾವುಗಳು ಹೇಗಿದ್ದರೂ ಪಾಸ್‌ಬುಕ್‌ಗಳನ್ನು ಕೊಡುತ್ತೀರಿ. ಹಾಗೆಯೇ ಸಹಕಾರ ಸಂಘಗಳ ಕ್ರೆಡಿಟ್ ಸೊಸೈಟಿಗಳು ಏನಿವೆ, ಅವರಿಗೂ ಕೂಡ ಒಂದು ಸುತ್ತೋಲೆಯನ್ನು ಕಳುಹಿಸಿ ಈ ತರಹ ಪಾಸ್‌ಬುಕ್‌ಗಳು ಬಂದರೆ ಲೋನ್ ಕೊಡುವ ಒಂದು ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇವೊತ್ತು ಕೂಡ ಲೋನ್ ತೆಗೆದುಕೊಳ್ಳಲು ಹೋದರೆ ಫಾರ್ಮ್ ನಂಬರ್ 8-9ನ್ನು ತೆಗೆದುಕೊಂಡು ಬನ್ನಿ ಎಂದು ಹೇಳುತ್ತಿದ್ದಾರೆ. ಅದಕ್ಕೆ ಸಹಕಾರ ಇಲಾಖೆಯಿಂದ ಒಂದು ಸರ್ಕ್ಯುಲರ್ ಕಳುಹಿಸಿ ಪಾಸ್‌ಬುಕ್ ಕೊಟ್ಟವರಿಗೆ ಅದರ ಮೇಲೆ ಲೋನ್ ಕೊಡುವ ವ್ಯವಸ್ಥೆಯಾಗಬೇಕು. ಆದುದರಿಂದ. ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಕೋರುತ್ತೇನೆ.

ಶ್ರೀ ಹೆಚ್.ಸಿ.ಶ್ರೀಕಂಠಯ್ಯ: ಆ ಕುರಿತು ಸೂಕ್ತ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಅಧ್ಯಕ್ಷರು: ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

(ಇ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಧರ್ಮಸಿಂಗ್(ಲೋಕೋಪಯೋಗಿ ಸಚಿವರು):ಸನ್ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಗಳನ್ನು ಒದಗಿಸುವ 23ನೇ ಪಟ್ಟಿಯಲ್ಲಿರುವ ಒಟ್ಟು 208 ಪ್ರಶ್ನೆಗಳ ಪೈಕಿ 160 ಉತ್ತರಗಳನ್ನು ಸಭೆಯಲ್ಲಿ ಮಂಡಿಸುತ್ತೇನೆ.

ಮಂಡ್ಯ ನಗರದಲ್ಲಿನ ಕೊಳಚೆ ಪ್ರದೇಶದ ಅಭಿವೃದ್ಧಿ.

2451(1932)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ನಗರದಲ್ಲಿ ಎಷ್ಟು ಅಧಿಕೃತ ಕೊಳಚೆ ಪ್ರದೇಶಗಳಿವೆ?

ಆ) ಈ ಕೊಳಚೆ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಅಭಿವೃದ್ಧಿಯ ಬಗೆಗೆ, ಮೂಲಭೂತ ಸೌಕರ್ಯ ಕಲ್ಪಿಸುವ ಬಗೆಗೆ, ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ. (ಬಡಾವಣೆವಾರು ವಿವರ ನೀಡುವುದು)

ಇ) ಈ ಕೊಳಚೆ ಪ್ರದೇಶಗಳಲ್ಲಿ ಎಷ್ಟು ಕೊಳಚೆ ನಿವಾಸಿಗಳಿಗೆ ಪುನರ್ವಸತಿ ಸೌಕರ್ಯ ಒದಗಿಸಲಾಗಿದೆ.

ಶ್ರೀ ಖಮರುಲ್ ಇಸ್ಲಾಂ (ವಸತಿ ಸಚಿವರು):

ಅ) ಮಂಡ್ಯ ನಗರದಲ್ಲಿ ಕಾಯಿದೆಯಡಿ ಘೋಷಿತಗೊಂಡ ಒಟ್ಟು 28 ಕೊಳಚೆ ಪ್ರದೇಶಗಳಿವೆ.

ಆ) ಘೋಷಿತಗೊಂಡ 28 ಕೊಳಚೆ ಪ್ರದೇಶಗಳಲ್ಲಿ ಕೈಗೊಳ್ಳಲಾಗಿರುವ ಅಭಿವೃದ್ಧಿ ಕಾಮಗಾರಿಗಳ ವಿವರ ಕೆಳಗಿನಂತಿವೆ.

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಕೊಳಚೆ ಪ್ರದೇಶದ ಹೆಸರು	ಕೈಗೊಂಡ ಕಾಮಗಾರಿ	ಖರ್ಚಾದ ಹಣ
1.	ಪೌರಕಾರ್ಮಿಕ ಕಾಲೋನಿ	ರಸ್ತೆ, ಚರಂಡಿ	
		ಕೊಳವೆ ಬಾವಿ	0.89
2.	ಕಾಳಮ್ಮ ದೇವಸ್ಥಾನ	ರಸ್ತೆ, ಚರಂಡಿ	
		ಕೊಳವೆ ಬಾವಿ	1.49
3.	ನಂದ ಟಾಕೀಸ್ ಹಿಂಭಾಗ	ರಸ್ತೆ, ಚರಂಡಿ	
		ಕಿರುನೀರು	0.85
4.	ತಮಿಳು ಕಾಲೋನಿಪೂರ್ವ	ಚರಂಡಿ ಕೊಳವೆ ಬಾವಿ	3.03
5.	ಸರ್ವೆ ನಂ.62 ಸಕ್ಕರೆ ಕಾರ್ಖಾನೆ	ರಸ್ತೆ, ಚರಂಡಿ	
		ಕೊಳವೆ ಬಾವಿ	1.29
6.	ಸ್ವತಂತ್ರ ಪಾಳ್ಯ	ರಸ್ತೆ, ಚರಂಡಿ	
		ಕೊಳವೆ ಬಾವಿ	0.90
7.	ಹಾಲಹಳ್ಳಿ ಟ್ಯಾಂಕ್‌ಬೆಡ್	ರಸ್ತೆ, ಚರಂಡಿ	
	(ಮುಸ್ಲಿಂ ಬ್ಲಾಕ್)	ಕೊಳವೆ ಬಾವಿ	0.90
8.	ಸಿಹಿನೀರು ಕೊಳ	ರಸ್ತೆ, ಚರಂಡಿ	0.47

9.	ಗುತ್ತಲು ಹರಿಜನ ಕಾಲೋನಿ	ರಸ್ತೆ, ಚರಂಡಿ	
		ಕೊಳವೆ ಬಾವಿ	0.78
10.	ನಲಬಂದವಾಡಿ	ಕಿರು ನೀರು ಸರಬರಾಜು,	
		ರಸ್ತೆ ಚರಂಡಿ	2.18
11.	ಸ್ಲಾಟರ್ ಹೌಸ್	ಕಿರು ನೀರು ಸರಬರಾಜು	
		ರಸ್ತೆ ಚರಂಡಿ	2.31
12.	ಮಂಡ್ಯ ಟ್ಯಾಂಕ್‌ಬೆಡ್	ಕೊಳವೆ ಬಾವಿ	
		ಕಿರುನೀರು ಸರಬರಾಜು	5.24
13.	ಹೊಸಹಳ್ಳಿ ಗುರುಮಠ	ಚರಂಡಿ ರಸ್ತೆ,	
		ಕೊಳವೆ ಬಾವಿ	0.90
14.	ಗಿರಿಜಾ ಟಾಕೀಸ್ ಎದುರು	ಕೊಳವೆ ಬಾವಿ	
		ಕಿರುನೀರು	14.17
15.	ಗೌರಿಸಮಾಜ	ಸಾತನೂರು ಬಡಾವಣೆಗೆ	
		ಭಾಗಶಃ ಸ್ಥಳಾಂತರಿಸಿದೆ	
16.	ಕುರುಬರ ಹಾಸ್ಟಲ್ ಹಿಂಭಾಗ	ರಸ್ತೆ ಚರಂಡಿ	1.09
17.	ಜಯರಾಮ ಲೇಔಟ್	ಚರಂಡಿ ರಸ್ತೆ,	
		ಕೊಳವೆ ಬಾವಿ	0.90
18.	ಆರ್.ಎ.ಪಿ.ಸಿ.ಎಂ.ಎಸ್. ಹತ್ತಿರ	ಭಾಗಶಃ ಸ್ಥಳಾಂತರಿಸಿದೆ	0.39
19.	ಸೈಂಟ್ ಜೋಸೆಫ್ ಮತ್ತು	ಹಾಲಹಳ್ಳಿ ಬಡಾವಣೆಗೆ	
	ಬೀರನಹಳ್ಳಿ	ಸ್ಥಳಾಂತರಿಸಿದೆ.	

20.	ನ್ಯೂ ತಮಿಳಿಯನ್ ಕಾಲೋನಿ	ರಸ್ತೆ, ಚರಂಡಿ ಕೊಳವೆ ಬಾವಿ	3.03
21.	ಕಲ್ಲಹಳ್ಳಿ ಮುಸ್ಲಿಂ ಬ್ಲಾಕ್	ರಸ್ತೆಚರಂಡಿ, ಅಂಗನವಾಡಿ ಕಿರುನೀರು ಸರಬರಾಜು	1.90
22.	ಅಂಗವಿಕಲರ ಕಾಲೋನಿ	ಸಾತನೂರು ಬಡಾವಣೆಗೆ ಭಾಗಶಃ ಸ್ಥಳಾಂತರಿಸಿದೆ	
23.	ವೇಣುಗೋಪಾಲ ಶಿಶುವಿಹಾರ	ರಸ್ತೆ ಚರಂಡಿ	0.35
		ಒಟ್ಟು	48.06

ಇ) ಮಂಡ್ಯ ನಗರದ ವಿವಿಧ ಕೊಳಚೆ ಪ್ರದೇಶಗಳಲ್ಲಿನ ಒಟ್ಟು 1285 ಕುಟುಂಬಗಳಿಗೆ ಪುನರ್ವಸತಿ ಸೌಕರ್ಯ ಒದಗಿಸಲಾಗಿದೆ.

ರಾಜ್ಯದಲ್ಲಿ ಕೃಷಿ ಆಯೋಗ ರಚನೆ.

2452(1933)

ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಕೃಷಿ ಆಯೋಗ ರಚಿಸುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಆ. ಹಾಗಿದ್ದಲ್ಲಿ, ಇದರ ಮೂಲ ಉದ್ದೇಶಗಳೇನು.

ಶ್ರೀ ಟಿ.ಬಿ.ಜಯಚಂದ್ರ (ಕೃಷಿ ಸಚಿವರು):

ಅ. ಇದೆ, ರಚಿಸಲಾಗಿದೆ.

ಆ. ರಾಜ್ಯದ 10 ಕೃಷಿ ಹವಾಮಾನ ಪ್ರದೇಶದಲ್ಲಿನ ವಾಸ್ತವಿಕ ಇಳುವರಿ ಮತ್ತು ಸಾಧ್ಯತಾ ಇಳುವರಿಗಳಲ್ಲಿನ ಅಂತರವನ್ನು ಕಡಿಮೆಗೊಳಿಸಲು ಉದ್ದಿಷ್ಟಕಾರ್ಯಗಳನ್ನು ಗುರುತಿಸುವುದು ಆಯೋಗವು ತೆಗೆದುಕೊಳ್ಳಬೇಕಾದ ತಕ್ಷಣದ ಕಾರ್ಯವಾಗಿರುತ್ತದೆ.